ICAR-NBAIR, Bengaluru, in collaboration with KVK Kolar, successfully conducted a Field Day at Rayalpad, Srinivasapura Taluk, Kolar (Karnataka).



# ರೈತರಿಂದಲೇ ಸಮೃದ್ಧ ದೇಶ

■ ವಿಜಯವಾಣಿ ಸುದ್ದಿಜಾಲ ರಾಯಲ್ಪಾಡು

ಹಣ ಎಷ್ಟೇ ಸಂಪಾದನೆ ಮಾಡಿದರೂ ಹೊಟ್ಟೆಗೆ ಅನ್ನವನ್ನೇ ತಿನ್ನಬೇಕು. ರೈತರು ವ್ಯವಸಾಯ ಮಾಡದಿದ್ದರೆ ಮಣ್ಣು ತಿನ್ನಲೂ ಸಾಧ್ಯವೇ. ರೈತರು ದೇಶದ ಬೆನ್ನೆಲುಬು ಅವರ ಕುಟುಂಬ ಸಮೃದ್ಧಿಯಾದರೆ ದೇಶವು ಸಮೃದ್ಧಿಯಾಗಿರುತ್ತದೆ ಎಂದು ಮಾಜಿ ಸಂಸದ ಎಸ್.ಮುನಿಸ್ವಾಮಿ ಹೇಳಿದರು.

ಶ್ರೀನಿವಾಸಪುರ ತಾಲೂಕು ಗ್ರಾಮದ ಗ್ರಾಪಂ ಕಚೇರಿ ಮುಂಭಾಗ ಮಂಗಳವಾರ ಬೆಂಗಳೂರಿನ ಭಾರತ ರಾಷ್ಟ್ರೀಯ ಕೀಟ ಸಂಪನ್ಮೂಲ ಬ್ಯೂರೋ ಮತ್ತು ಕೋಲಾರ ಕೃಷಿ ವಿಜ್ಞಾನ ಕೇಂದ್ರ ಸಹಯೋಗದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ಕೃಷಿ ಸಲಕರಣೆಗಳನ್ನು ವಿತರಿಸಿ ಮಾತನಾಡಿದರು.

ರೈತರು ಮನಸ್ಸು ಮಾಡಿದರೆ ಏನನ್ನಾದರೂ ಸಾಧನೆ ಮಾಡಬಹುದು. ಆದರೆ, ಮನಸ್ಸು ಮಾಡಬೇಕು ಅಷ್ಟೆ. ವ್ಯವಸಾಯದಿಂದ ಹಣ, ಮಕ್ಕಳಿಗೆ ವಿದ್ಯಾಭ್ಯಾಸ, ಮದುವೆ, ಮನೆ ಹಾಗೂ ಆಸ್ತಿ-ಅಂತಸ್ತು ಮಾಡಬಹುದು ಆದರೆ ಇದರಿಂದ ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ ಎಂದರು.

ರೈತರು ತಾವು ಬೆಳೆದ ರಾಗಿ, ಭತ್ತ ಇತರೆ ತೋಟಗಾರಿಕೆ ಬೆಳೆಗಳನ್ನು ಮಾರುಕಟ್ಟೆ ಹಾಕುವಾಗ ಯಾವುದೇ ಕಾರಣಕ್ಕೂ ಮೋಸ ಹೋಗಬೇಡಿ. ಪರಿಶಿಷ್ಟ ಜಾತಿ ರೈತರು ಯಾರು ಯೋಜನೆ ಬಗ್ಗೆ ಅರಿವು ಇಲ್ಲವೋ ಅವರು ಅರ್ಜಿಗಳನ್ನು ಸಲ್ಲಿಸಿ ಕೇಂದ್ರ ಸರ್ಕಾರ ಕೃಷಿ ಸಲಕರಣೆಗಳನ್ನು ಸ್ವೀಕರಿಸಬಹುದಾಗಿದೆ ಎಂದರು.

200 ಅರ್ಹ ಫಲಾನುಭವಿಗಳು ಕೃಷಿ ಸಲಕರಣೆಗಳನ್ನು ನೀಡಲಾಯಿತು. ಬಿಜೆಪಿ ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಕೆ.ಎನ್.ವೇಣುಗೋಪಾಲರೆಡ್ಡಿ, ಬೆಂಗಳೂರು ಭಾರತ ರಾಷ್ಟ್ರೀಯ ಕೀಟ ಸಂಪನ್ಮೂಲ ಬ್ಯೂರೋ ಸಂಪನ್ಮೂಲ ವ್ಯಕ್ತಿ ಎಸ್ ಎನ್. ಸುಶೀಲಾ, ತಾಲೂಕು ಬಿಜೆಪಿ ಪಕ್ಷದ ಅಧ್ಯಕ್ಷ ಆರ್.ಎನ್.ಚಂದ್ರಶೇಖರ್, ಮುಖಂಡ ಸಿಮೆಂಟ್ ನಾರಾಯಣಸ್ವಾಮಿ, ಪಿಡಿಒ ನರೇಂದ್ರಬಾಬು, ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಮಂಜೇಶ್, ಮುಖಂಡ ಆಂಜಿ, ಮಣಿ, ವೆಂಕಟರಮಣ ಇದ್ದರು.

ರಾಯಲ್ಪಾಡು ಗ್ರಾಮ ಪಂಚಾಯಿತಿ ಕಚೇರಿಯ ಮುಂದೆ ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ರೈತರಿಗೆ ಕೃಷಿ ಸಲಕರಣೆಗಳನ್ನು ಎಸ್.ಮುನಿಸ್ವಾಮಿ ವಿತರಣೆ ಮಾಡಿದರು.

Vijayavani News